**ಜಂಟಿ ಹೇಳಿಕೆ: 4 ನೇ ಭಾರತ-ಬಹ್ರೈನ್ ಉನ್ನತ ಜಂಟಿ ಆಯೋಗದ ಸಭೆ**

ಡಿಸೆಂಬರ್ 09, 2024

ಬಹ್ರೈನ್‌ನ ಮನಾಮದಲ್ಲಿ 9 ಡಿಸೆಂಬರ್ 2024 ರಂದು ನಡೆದ ಭಾರತ-ಬಹ್ರೈನ್‌ನ ನಾಲ್ಕನೇ ಉನ್ನತ ಜಂಟಿ ಆಯೋಗ (HJC) ಸಭೆಯನ್ನು, ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾದ (EAM) ಗೌರವಾನ್ವಿತ ಎಸ್. ಜೈಶಂಕರ್ ಮತ್ತು ಬಹ್ರೈನ್ ಸಂಸ್ಥಾನದ ವಿದೇಶಾಂಗ ವ್ಯವಹಾರಗಳ ಸಚಿವರಾದ ಗೌರವಾನ್ವಿತ ಡಾ. ಅಬ್ದುಲ್‌ಲತೀಫ್ ಬಿನ್ ರಶೀದ್ ಅಲ್ಜಯಾನಿ ಸಹ-ನೇತೃತ್ವ ವಹಿಸಿದ್ದರು.

2. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾದ ಗೌರವಾನ್ವಿತ ಡಾ. ಎಸ್. ಜೈಶಂಕರ್ ಅವರು ಬಹ್ರೈನ್ ವಿದೇಶಾಂಗ ಸಚಿವ ಗೌರವಾನ್ವಿತ ಡಾ. ಅಲ್ಜಯಾನಿ ಅವರ ಆಹ್ವಾನದ ಮೇರೆಗೆ 7 ರಿಂದ 9 ಡಿಸೆಂಬರ್ 2024 ರವರೆಗೆ ಬಹ್ರೈನ್ ಭೇಟಿಯಲ್ಲಿದ್ದರು. ಬೆಚ್ಚಗಿನ ಸಂಬಂಧಗಳು ಮತ್ತು ಆಳವಾದ ದ್ವಿಪಕ್ಷೀಯ ಬಂಧಗಳನ್ನು ಪ್ರತಿಬಿಂಬಿಸುವ, ಬೇಟಿಯ ಸಂದರ್ಭದಲ್ಲಿ ಗೌರವಾನ್ವಿತ ಡಾ.ಎಸ್.ಜೈಶಂಕರ್ ಅವರು ಬಹ್ರೈನ್ ಉಪಪ್ರಧಾನಿ ಗೌರವಾನ್ವಿತ ಶೇಖ್ ಖಾಲಿದ್ ಬಿನ್ ಅಬ್ದುಲ್ಲಾ ಅಲ್ ಖಲೀಫಾ ಅವರನ್ನು ಸಂದರ್ಶಿಸಿದರು.

3. ಬಹ್ರೈನ್‌ನ ಗೌರವಾನ್ವಿತ ರಾಜರಾದ ಹಮಾದ್ ಬಿನ್ ಇಸಾ ಅಲ್ ಖಲೀಫಾ 18-20 ಫೆಬ್ರುವರಿ 2014 ರಂದು ಭಾರತ ಭೇಟಿಯ ಸಮಯದಲ್ಲಿ ಎರಡು ಕಡೆಯ ನಡುವೆ ಸಹಿ ಮಾಡಿದ MOU ನ ಅನುಸಾರವಾಗಿ HJC ಸ್ಥಾಪಿಸಲಾಯಿತು.

4. ಗೌರವಾನ್ವಿತ ಡಾ. ಅಬ್ದುಲ್‌ಲತೀಫ್ ಬಿನ್ ರಶೀದ್ ಅಲ್ಜಯಾನಿ ಅವರು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾದ ಗೌರವಾನ್ವಿತ ಡಾ. ಎಸ್. ಜೈಶಂಕರ್ ಮತ್ತು ಜೊತೆಗೆ ಬಹ್ರೈನ್‌ಗೆ ಬಂದ ನಿಯೋಗವನ್ನು ಸ್ವಾಗತಿಸಿದರು. ಅವರು 7 ಏಪ್ರಿಲ್ 2021 ರಂದು ನವದೆಹಲಿಯಲ್ಲಿ ನಡೆದ ಮೂರನೇ HJC ಗಾಗಿ ಭಾರತಕ್ಕೆ ಭೇಟಿ ನೀಡಿದ ಸಮಯದಲ್ಲಿ ಅವರಿಗೆ ಮತ್ತು ಅವರ ನಿಯೋಗಕ್ಕೆ ನೀಡಿದ ಬೆಚ್ಚಗಿನ ಆತಿಥ್ಯವನ್ನು ನೆನಪಿಸಿಕೊಂಡರು. ಗೌರವಾನ್ವಿತ ಡಾ. ಎಸ್. ಜೈಶಂಕರ್ ಅವರು ಮತ್ತು ಅವರ ಜೊತೆಗಿನ ನಿಯೋಗಕ್ಕೆ ಬಹ್ರೈನ್ನಿಯರು ನೀಡಿದ ಸ್ವಾಗತ ಮತ್ತು ಉತ್ಸಾಹಭರಿತ ಆತಿಥ್ಯಕ್ಕೆ ಧನ್ಯವಾದ ಸಲ್ಲಿಸಿದರು. HJC ಯ ನಿಯಮಿತ ಸಭೆಗಳು ಎರಡೂ ದೇಶಗಳ ನಡುವಿನ ದೃಢ ಸಂಬಂಧಗಳನ್ನು ಪ್ರತಿಬಿಂಬಿಸುತ್ತವೆ ಎಂದು ಇಬ್ಬದಿಯಿಂದಲೂ ಪ್ರಶಂಸಿಸಲಾಯಿತು.

5. ಫೆಬ್ರುವರಿ 2014 ರಲ್ಲಿ ಭಾರತಕ್ಕೆ ಗೌರವಾನ್ವಿತ ರಾಜರಾದ ಹಮಾದ್ ಬಿನ್ ಇಸಾ ಅಲ್ ಖಲೀಫಾ ಅವರ ಐತಿಹಾಸಿಕ ಭೇಟಿಯ 10 ನೇ ವಾರ್ಷಿಕೋತ್ಸವವನ್ನು ಗುರುತಿಸುವ ಮತ್ತು ಆಗಸ್ಟ 2019 ರಲ್ಲಿ ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ

ಬಹ್ರೈನ್ ದೇಶದ ಭೇಟಿಯ 5 ನೇ ವಾರ್ಷಿಕೋತ್ಸವವನ್ನು ನೆನಪಿಸುವ ಈ ಸಂದರ್ಭದ ಮಹತ್ವವನ್ನು ಎರಡೂ ಕಡೆಯಿಂದ ಒಪ್ಪಿಕೊಳ್ಳಲಾಯಿತು. ದೀರ್ಘಾವಧಿಯ ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ವೇಗವನ್ನು ನೀಡುವಲ್ಲಿ ಈ ಭೇಟಿಗಳು ಪಾತ್ರವಹಿಸುತ್ತವೆ ಎಂಬುದು ಒಮ್ಮತದ ಅಭಿಪ್ರಾಯವಾಗಿತ್ತು. ಬಹ್ರೈನ್ ಸಂಸ್ಥಾನದ ರಾಜಮನೆತನದ ರಾಜಕುಮಾರ ಮತ್ತು ಬಹ್ರೈನ್ ಪ್ರಧಾನ ಮಂತ್ರಿಯಾದ ಗೌರವಾನ್ವಿತ ರಾಜರದ ಸಲ್ಮಾನ್ ಬಿನ್ ಹಮಾದ್ ಅಲ್ ಖಲೀಫಾ ಅವರಿಗೆ ಭಾರತಕ್ಕೆ ಭೇಟಿ ನೀಡುವಂತೆ ಗೌರವಾನ್ವಿತ ಪ್ರಧಾನ ಮಂತ್ರಿಯವರು ಮರು ಆಹ್ವಾನವಿತ್ತರು.

6. ಪ್ರಧಾನ ಮಂತ್ರಿಗಳಾದ ಗೌರವಾನ್ವಿತ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದ ಹೊಸ ಭಾರತ ಸರ್ಕಾರದ ಪ್ರಮಾಣ ವಚನ ಸ್ವೀಕಾರದ ನಂತರ ಹೆಚ್ಚಿದ ರಾಜಕೀಯ ತೊಡಗುವಿಕೆಯನ್ನು ಬಹ್ರೈನ್ ಭಾಗದಿಂದ ಶ್ಲಾಘಿಸಲಾಯಿತು. ರಾಜಮನೆತನದ ರಾಜಕುಮಾರ ಮತ್ತು ಬಹ್ರೈನ್ ಪ್ರಧಾನ ಮಂತ್ರಿಯಾದ ಗೌರವಾನ್ವಿತ ರಾಜರದ ಸಲ್ಮಾನ್ ಬಿನ್ ಹಮಾದ್ ಅಲ್ ಖಲೀಫಾ ಹೊಸ ಸರ್ಕಾರಕ್ಕೆ ಅಭಿನಂದನಾ ಸಂದೇಶ ನೀಡಿರುವುದಕ್ಕಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ  ಕೃತಜ್ಞತೆಯನ್ನು ಸಲ್ಲಿಸಲಾಯಿತು ಮತ್ತು ದ್ವಿಪಕ್ಷೀಯ ಸಂಬಂಧಗಳ ಗತಿಯನ್ನು ಮುಂದುವರಿಸಲು ಬದ್ಧತೆ ವ್ಯಕ್ತಪಡಿಸಲಾಯಿತು.

7. ಏಪ್ರಿಲ್ 2021 ರಲ್ಲಿ ಏರ್ಪಡಿಸಲಾದ ಮೂರನೇ HJC ಯಲ್ಲಿ ನಡೆದ ಚರ್ಚೆಗಳಿಗೆ ಅನುಗುಣವಾಗಿ ಎರಡು ಸಚಿವರು ದ್ವಿಪಕ್ಷೀಯ ಸಂಬಂಧಗಳಲ್ಲಿ ಸಾಧಿಸಿದ ಪ್ರಗತಿಯನ್ನು ಮತ್ತು ಮಾರ್ಚ್ 2022 ಮತ್ತು ಮೇ 2023 ರಲ್ಲಿ ನಡೆಸಲಾದ ನಂತರದ ಐದನೇ ಮತ್ತು ಆರನೇ ವಿದೇಶಿ ಕಚೇರಿ ಸಮಾಲೋಚನೆಗಳನ್ನು ಪ್ರಶಂಸಿಸಿದರು.  ಎರಡೂ ಕಡೆಯಿಂದ ಉನ್ನತ ಮಟ್ಟದ ದ್ವಿಪಕ್ಷೀಯ ಭೇಟಿಗಳು ಮತ್ತು ಸಭೆಗಳ ಗತಿಯನ್ನು ಮುಂದುವರಿಸಿಕೊಂಡು ಹೋಗಲು ಒಪ್ಪಿಕೊಳ್ಳಲಾಯಿತು ಮತ್ತು ಉಭಯ ದೇಶಗಳ ನಡುವಿನ ನಿಯಮಿತ ಉನ್ನತ ಮಟ್ಟದ ವಿನಿಮಯಗಳಲ್ಲಿ ತೃಪ್ತಿಯನ್ನು ವ್ಯಕ್ತಪಡಿಸಿದವು.

8. ಇಂಧನ ಮತ್ತು ಹೈಡ್ರೋಕಾರ್ಬನ್‌ಗಳು, ನವೀಕರಿಸಬಹುದಾದ ಶಕ್ತಿ, ಮೂಲಸೌಕರ್ಯ, ವ್ಯಾಪಾರ ಮತ್ತು ಹೂಡಿಕೆಗಳು, ರಕ್ಷಣೆ ಮತ್ತು ಭದ್ರತೆ, ಆರೋಗ್ಯ, ಆಹಾರ ಮತ್ತು ಕೃಷಿ, ಆತಿಥ್ಯ, ಔಷಧೀಯ ಉದ್ಯಮ, ಎಲೆಕ್ಟ್ರಾನಿಕ್ ಉದ್ಯಮ, ಡೌನ್‌ಸ್ಟ್ರೀಮ್ ಅಲ್ಯೂಮಿನಿಯಂ, IT ಮತ್ತು ಡೇಟಾ ಕೇಂದ್ರಗಳು, ಬಾಹ್ಯಾಕಾಶ, ಪ್ರವಾಸೋದ್ಯಮ, ಪರಿಸರ, ಯುವ ಮತ್ತು ಕ್ರೀಡೆಗಳು ಸೇರಿದಂತೆ ವೈವಿಧ್ಯಮಯ ಪ್ರದೇಶಗಳಲ್ಲಿ ಸಹಕಾರದ ಮಾರ್ಗಗಳನ್ನು ಅನ್ವೇಷಿಸಲು ಎರಡು ಸಚಿವರು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

9. ಐತಿಹಾಸಿಕ ರಾಜ್ಯ ಭೇಟಿಗಳ ನಂತರ ರಾಜಕೀಯ ಮತ್ತು ಜನರಿಂದ ಜನರ ಸಂಬಂಧಗಳ ಗಾಢತೆಗೆ ಎರಡೂ ಕಡೆಯವರು ಸಾಕ್ಷಿಯಾದರು. 2019 ರಲ್ಲಿ ಗೌರವಾನ್ವಿತ ಪ್ರಧಾನ

ಮಂತ್ರಿಗಳ ರಾಜ್ಯ ಭೇಟಿಯ ನಂತರ ಬಹ್ರೈನ್‌ನಲ್ಲಿ ಭಾರತೀಯ ಹೂಡಿಕೆಯ ಹೆಚ್ಚಳವನ್ನು ಭಾರತೀಯರ ಕಡೆಯಿಂದ ಎತ್ತಿ ತೋರಿಸಲಾಯಿತು. ಉಭಯ ಬದಿಗಳಿಂದ ಭಾರತಕ್ಕೆ ಮಾರ್ಚ್ 2023 ಮತ್ತು ಡಿಸೆಂಬರ್ 2024 ರಲ್ಲಿ ಬಹ್ರೈನ್ ಕೈಗಾರಿಕೆ ಮತ್ತು ವಾಣಿಜ್ಯ ಸಚಿವ, ಗೌರವಾನ್ವಿತ ಅಬ್ದುಲ್ಲಾ ಬಿನ್ ಅಡೆಲ್ ಫಖ್ರೋ ನೇತೃತ್ವದ ವ್ಯಾಪಾರ ನಿಯೋಗಗಳನ್ನು ಒಳಗೊಂಡ ಭೇಟಿ ಮತ್ತು ಸೆಪ್ಟೆಂಬರ್ 2024 ರಲ್ಲಿ ಸುಸ್ಥಿರ ಅಭಿವೃದ್ಧಿ ಮಂತ್ರಿ ಮತ್ತು ಬಹ್ರೈನ್ EDB ಯ ಮುಖ್ಯ ಕಾರ್ಯನಿರ್ವಾಹಕ, ಗೌರವಾನ್ವಿತ ನೂರ್ ಬಿಂತ್ ಅಲಿ ಅಲ್ಖುಲೈಫ್ ನೇತೃತ್ವದ ಭೇಟಿಗಳನ್ನು ಸ್ವಾಗತಿಸಲಾಯಿತು. ಬಹ್ರೈನ್ ತಂಡದಿಂದ ವಿಶೇಷವಾಗಿ 2024 ರ ಆರಂಭದಿಂದ ಆದ ಭಾರತೀಯ ಹೂಡಿಕೆಗಳನ್ನು ಮತ್ತು ಬಹ್ರೈನ್‌ಗೆ ಜಾಗತಿಕ ಭಾರತೀಯ ಬ್ರ್ಯಾಂಡ್‌ಗಳ ಆಗಮನವನ್ನು ಸ್ವಾಗತಿಸಲಾಯಿತು.

10. ಉಭಯ ಕಡೆಯಿಂದ ದ್ವಿಪಕ್ಷೀಯ ವ್ಯಾಪಾರದ ಸ್ಥಿರತೆ, ಸುಸ್ಥಿರತೆ ಮತ್ತು ವೈವಿಧ್ಯತೆಯ ಮೇಲೆ ತೃಪ್ತಿಯನ್ನು ವ್ಯಕ್ತಪಡಿಸಲಾಯಿತು. ಅವರು ಈ ವ್ಯಾಪಾರ ಮತ್ತು ಹೂಡಿಕೆ ಸಂಬಂಧಗಳನ್ನು ಬಲಪಡಿಸುವ ಕಾರ್ಯಕ್ಕಾಗಿ ಒಪ್ಪಿಗೆ ನೀಡಿದರು ಮತ್ತು ಈ ವಿಷಯದಲ್ಲಿ ವ್ಯಾಪಾರ ಮತ್ತು ಹೂಡಿಕೆಯ ಮೇಲೆ ದ್ವಿಪಕ್ಷೀಯ ಜಂಟಿ ಕಾರ್ಯನಿರ್ವಹಣೆ ಗುಂಪು ರಚನೆಗಾಗಿ ಕಾರ್ಯನಿರ್ವಹಿಸಲು ಸಮ್ಮತಿ ನೀಡಿದರು.

11. ಮಾಹಿತಿ, ಅಧಿಕೃತ ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಮತ್ತು ಗುಣಮಟ್ಟಗಳ ಅಭಿವೃದ್ಧಿ, ಅನುಸರಣೆ ಮೌಲ್ಯಮಾಪನ, ಮಾಪನಶಾಸ್ತ್ರ, ಮಾನ್ಯತೆ, ಲೋಹದ ವಿಶ್ಲೇಷಣೆ, ಮುತ್ತುಗಳು ಮತ್ತು ರತ್ನದ ಕಲ್ಲುಗಳ ಪರೀಕ್ಷಾ ಚಟುವಟಿಕೆಗಳಲ್ಲಿ ಅವಕಾಶಗಳು ಮತ್ತು ಅಡೆತಡೆಗಳನ್ನು ಗುರುತಿಸುವ ಮೂಲಕ ಬಹ್ರೈನ್‌ನ ರಾಷ್ಟ್ರೀಯ ಪ್ರಮಾಣೀಕರಣ ಸಂಸ್ಥೆ ಮತ್ತು ರಾಷ್ಟ್ರೀಯ ಪರೀಕ್ಷಾ ಕೇಂದ್ರವು ಭಾರತೀಯ ಪ್ರಮಾಣೀಕರಣ ಸಂಸ್ಥೆ ಮತ್ತು ಭಾರತದಲ್ಲಿನ ಸಂಬಂಧಿತ ಅಧಿಕೃತ ಸಂಸ್ಥೆಗಳೊಂದಿಗೆ ಸಹಕರಿಸುವ ಗುರಿಯನ್ನು ಹೊಂದಿದೆ.

12. ತೆರಿಗೆ ವಿಷಯಗಳಲ್ಲಿ ಸಹಕಾರವನ್ನು ಬಲಪಡಿಸುವ ಮತ್ತು ಸ್ನೇಹಬದ್ಧ ಉಭಯ ರಾಷ್ಟ್ರಗಳ ನಡುವೆ ಆರ್ಥಿಕ, ವಾಣಿಜ್ಯ ಮತ್ತು ಹೂಡಿಕೆ ಅವಕಾಶಗಳನ್ನು ಅಭಿವೃದ್ಧಿಪಡಿಸುವ ಗುರಿಯೊಂದಿಗೆ ಭಾರತದೊಂದಿಗೆ (DTA) ಡಬಲ್ ತೆರಿಗೆಯನ್ನು ತೆಗೆದುಹಾಕುವ ದ್ವಿಪಕ್ಷೀಯ ಒಪ್ಪಂದವನ್ನು ಮುಕ್ತಾಯಗೊಳಿಸುವ ತನ್ನ ಆಸಕ್ತಿಯನ್ನು ಬಹ್ರೈನ್ ನವೀಕರಿಸಿತು.

13. 3-4 ಸೆಪ್ಟೆಂಬರ್ 2024 ರಂದು ನಡೆದ ದ್ವಿಪಕ್ಷೀಯ ಹೂಡಿಕೆ ಒಪ್ಪಂದದ ಮಾತುಕತೆಗಳಿಗೆ ಚಾಲನೆ ನೀಡಿರುವುದನ್ನು ಉಭಯ ಕಡೆಯವರು ಸ್ವಾಗತಿಸಿದರು ಮತ್ತು ಬೇಗನೇ ಮುಗಿಸುವತ್ತ ಕಾರ್ಯನಿರ್ವಹಿಸಲು ಒಪ್ಪಿಕೊಳ್ಳಲಾಯಿತು.

14.  ಬಹ್ರೈನ್‌ನಲ್ಲಿ ಭಾರತೀಯ ರೂಪೇ ಕಾರ್ಡ್‌ನ ಸ್ವೀಕಾರವನ್ನು ಶೀಘ್ರವಾಗಿ ಪ್ರಾರಂಭಿಸಲು ಮಾತುಕತೆಗಳನ್ನು ತ್ವರಿತಗೊಳಿಸಲು ಇಬ್ಬರು ಸಚಿವರು ಒಪ್ಪಿಕೊಂಡರು.  ಅವರು ಫಿನ್‌ಟೆಕ್ ಮತ್ತು ಡಿಜಿಟಲ್ ಪಾವತಿಗಳ ವಲಯಗಳಲ್ಲಿ ನಿಕಟ ಸಹಕಾರದ ಕಡೆಗೆ ಕಾರ್ಯನಿರ್ವಹಿಸಲು ಕೂಡ ಒಪ್ಪಿಕೊಂಡರು.

15. ಎರಡೂ ಕಡೆಯವರು ಆರೋಗ್ಯ ಮತ್ತು ಔಷಧೀಯ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಯೋಗದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು ಮತ್ತು 22 ಫೆಬ್ರುವರಿ 2022 ರಂದು ನಡೆದ ಆರೋಗ್ಯ ಸಹಕಾರದ ಯಶಸ್ವಿ ಮೊದಲ ಜಂಟಿ ಕಾರ್ಯನಿರ್ವಹಣೆ ಗುಂಪು (JWG) ಸಭೆಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ದೇಶದ ರಾಷ್ಟ್ರೀಯ ನೀತಿಗಳು, ನಿಯಮಗಳು ಮತ್ತು ಕಾನೂನು ಚೌಕಟ್ಟುಗಳಿಗೆ ಅನುಗುಣವಾಗಿ ತೆಗೆದುಕೊಳ್ಳಲಾದ ನಿರ್ಧಾರಗಳನ್ನು ಅನುಷ್ಠಾನಗೊಳಿಸುವತ್ತ ಕೆಲಸ ಮಾಡಲು ಒಪ್ಪಿಗೆ ಮಾಡಿಕೊಳ್ಳಲಾಯಿತು ಮತ್ತು ಎರಡು ದೇಶಗಳ ಆರೋಗ್ಯ ಸಚಿವಾಲಯಗಳು ಹೆಲ್ತ್‌ಕೇರ್ ಸಹಕಾರದ ಎರಡನೇ ಸಭೆಯನ್ನು ಆದಷ್ಟು ಬೇಗ ನಡೆಸುವ ಗುರಿಯ ಮೇಲೆ ಕೆಲಸ ಮಾಡುತ್ತಿವೆ ಎಂಬುದರ ಬಗ್ಗೆ ನೋಟ ಹರಿಸಿ ತೃಪ್ತಿ ವ್ಯಕ್ತಪಡಿಸಲಾಯಿತು.

16.  ವಿಶ್ವದ ನಾಯಕತ್ವ ಸ್ಥಾನದಲ್ಲಿ ಒಂದಾಗಿ ಭಾರತೀಯ ಔಷಧೀಯ ಉದ್ಯಮದ ಪಾತ್ರವನ್ನು ಭಾರತದ ಕಡೆಯವರು ಎತ್ತಿ ತೋರಿಸಿದರು ಮತ್ತು ಬಹ್ರೈನ್ ಸಂಸ್ಥಾನದ ಸ್ಥಾಪಿತ ನಿಯಂತ್ರಕ ಅಗತ್ಯತೆಗಳಿಗೆ ಅನುಗುಣವಾಗಿ ಬಹ್ರೈನ್ ಮಾರುಕಟ್ಟೆಯಲ್ಲಿ ಭಾರತೀಯ ಔಷಧೀಯ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರವೇಶದ ಪ್ರಾಮುಖ್ಯತೆಯನ್ನು ತಿಳಿಸಿದರು.  ಔಷಧಗಳು, ಲಸಿಕೆಗಳು ಮತ್ತು ವೈದ್ಯಕೀಯ ಸಾಧನಗಳಲ್ಲಿ ವ್ಯಾಪಾರವನ್ನು ಹೆಚ್ಚಿಸಲು ಉಭಯ ದೇಶಗಳ ಖಾಸಗಿ ವಲಯಗಳಿಗೆ ಅನುಕೂಲ ಕಲ್ಪಿಸಲು ಕೂಡ ಎರಡೂ ಕಡೆಯವರು ಒಪ್ಪಿಕೊಂಡರು.

17.  ವೈದ್ಯಕೀಯ ಪ್ರವಾಸೋದ್ಯಮದ ಕೇಂದ್ರವಾಗಿ ಎರಡೂ ರಾಷ್ಟ್ರಗಳ ಸ್ಥಾನಗಳನ್ನು ಮುನ್ನಡೆಸುವಲ್ಲಿ ಸಹಯೋಗದ ಮಹತ್ವದ ಸಾಮರ್ಥ್ಯವನ್ನು ಇಬ್ಬರೂ ಮಂತ್ರಿಗಳು ಒಪ್ಪಿಕೊಂಡರು.

18.  ಎರಡೂ ಕಡೆಯಿಂದ ಕೃಷಿ ಮತ್ತು ಜಾನುವಾರು ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವಲ್ಲಿ ಸಹಕಾರವನ್ನು ಹೆಚ್ಚಿಸಲು ಒತ್ತು ನೀಡಲಾಯಿತು.  ಭಾರತದ ಫುಡ್ ಪಾರ್ಕ್‌ಗಳಲ್ಲಿ ಹೂಡಿಕೆ ಮಾಡಲು ಮತ್ತು ಭಾರತದಿಂದ ಬಹ್ರೈನ್‌ಗೆ ಆಹಾರ ರಫ್ತುಗಳನ್ನು ಹೆಚ್ಚಿಸುವ ಮಹತ್ವದ ಅವಕಾಶಗಳನ್ನು ಭಾರತದ ಕಡೆಯಿಂದ ಎತ್ತಿ ಹಿಡಿಯಲಾಯಿತು.  ಆಹಾರ ಭದ್ರತೆಯನ್ನು ಸಾಧಿಸುವ ಗುರಿಯನ್ನು ಹೊಂದಿರುವ ದ್ವಿಪಕ್ಷೀಯ ಯೋಜನೆಗಳನ್ನು ಬೆಳೆಸಲು ಎರಡು ದೇಶಗಳ ನಡುವೆ ಅನುಭವಗಳನ್ನು ವಿನಿಮಯ ಮಾಡುವ ಪ್ರಾಮುಖ್ಯತೆಯನ್ನು ಬಹ್ರೈನ್ ಒತ್ತಿಹೇಳಿತು.

19. ಬಹ್ರೈನ್ ಮತ್ತು ಭಾರತದ ನಡುವಿನ ಪಾಲುದಾರಿಕೆಯ ಐತಿಹಾಸಿಕ ಪ್ರಮುಖ ಕ್ಷೇತ್ರವಾಗಿ ಇಂಧನ ಶಕ್ತಿ ಉಳಿದುಕೊಂಡಿದೆ. ಎರಡೂ ಕಡೆಯಿಂದ ಹೈಡ್ರೋಕಾರ್ಬನ್ ವ್ಯಾಪಾರದ ಮಹತ್ವವನ್ನು ಈ ಸಹಕಾರದ ಪ್ರಮುಖ ಅಂಶವಾಗಿ ಗುರುತಿಸಲಾಯಿತು, ಇದು ಪರಸ್ಪರ ಇಂಧನ ಶಕ್ತಿಯ ಭದ್ರತೆ ಮತ್ತು ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತದೆ. ಬಹ್ರೈನ್‌ನಲ್ಲಿ ವಿಶೇಷವಾಗಿ ತೈಲ ಮತ್ತು ಅನಿಲದ ಅಪ್‌ಸ್ಟ್ರೀಮ್ ಮತ್ತು ಡೌನ್‌ಸ್ಟ್ರೀಮ್ ವಲಯಗಳಲ್ಲಿ ಇಂಧನ ಸಹಕಾರವನ್ನು ಹೆಚ್ಚಿಸುವಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ವಿಸ್ತರಿತ ವ್ಯಾಪಾರ, ಜಂಟಿ ಉದ್ಯಮಗಳು ಮತ್ತು ಪರಸ್ಪರ ಹೂಡಿಕೆಗಳಿಗೆ ಮಾರ್ಗಗಳನ್ನು ಅನ್ವೇಷಿಸಲು ಉಭಯ ಕಡೆಯವರು ಬದ್ಧತೆ ವ್ಯಕ್ತಪಡಿಸಿದರು.

20. 2018 ರಲ್ಲಿ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದಾಗಿನಿಂದ ನವೀಕರಿಸಬಹುದಾದ ಇಂಧನ ವಲಯದಲ್ಲಿನ ತೃಪ್ತಿದಾಯಕ ದ್ವಿಪಕ್ಷೀಯ ಬೆಳವಣಿಗೆಗಳ ಮೇಲೆ ಎರಡೂ ಕಡೆಯಿಂದ ಗಮನಹರಿಸಲಾಯಿತು ಮತ್ತು ಜಂಟಿ ಕಾರ್ಯ ನಿರ್ವಹಣೆ ಗುಂಪಿನ 2 ನೇ ಸಭೆಯನ್ನು ಆರಂಭಿಕ ದಿನಾಂಕದಲ್ಲಿ ಕರೆಯಲು ಒಪ್ಪಿಕೊಳ್ಳಲಾಯಿತು. ವಿಶೇಷವಾಗಿ ಸೌರ, ಗಾಳಿ, ಹಸಿರು ಹೈಡ್ರೋಜನ್ ಮತ್ತು ಹಸಿರು ಅಮೋನಿಯಾ ಕ್ಷೇತ್ರದಲ್ಲಿ ದ್ವಿಪಕ್ಷೀಯ ತೊಡಗಿಸಿಕೊಳ್ಳುವಿಕೆಗಳಲ್ಲಿ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ವಲಯವನ್ನು ತೊಡಗಿಸಿಕೊಳ್ಳುವ ಮೂಲಕ ಅವರು ಸಹಕಾರವನ್ನು ಆಳಗೊಳಿಸಲು ಒಪ್ಪಿಕೊಂಡರು. ಬಹ್ರೈನ್ 2022 ರಲ್ಲಿ ಅಂತಾರಾಷ್ಟ್ರೀಯ ಸೌರ ಮೈತ್ರಿ (ISA)ಯ ಸದಸ್ಯತ್ವ ಪಡೆದಿದೆ ಎಂಬುದನ್ನು ವಿದೇಶಾಂಗ ಮಂತ್ರಿಗಳು ನೆನಪಿಸಿಕೊಂಡರು.

21. ನ್ಯಾನೋ/ಕ್ಯೂಬ್-ಉಪಗ್ರಹವನ್ನು ನಿರ್ಮಿಸುವಲ್ಲಿ ಮತ್ತು ಉಡಾವಣೆ ಮಾಡುವಲ್ಲಿ ಮತ್ತು ಬಹ್ರೈನ್‌ನ ಸಾಮರ್ಥ್ಯ ವೃದ್ಧಿಗೆ ನೆರವು ನೀಡುವಲ್ಲಿ ಆಳವಾದ ಸಹಯೋಗದಲ್ಲಿ ISRO (ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ) ಮತ್ತು ಬಹ್ರೈನ್‌ನ NSSA (ರಾಷ್ಟ್ರೀಯ ಬಾಹ್ಯಾಕಾಶ ವಿಜ್ಞಾನ ಸಂಸ್ಥೆ) ಮಾಡಿರುವ ಪ್ರಗತಿಗೆ ಇಬ್ಬರು ಸಚಿವರು ತೃಪ್ತಿ ವ್ಯಕ್ತಪಡಿಸಿದರು. ಬಾಹ್ಯಾಕಾಶ ವಲಯದಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಎರಡೂ ದೇಶಗಳು ಪ್ರಸ್ತುತ NSSA ಮತ್ತು NSIL (ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್) ನಡುವೆ ಕರಡು ತಿಳುವಳಿಕೆಯ ಒಪ್ಪಂದವನ್ನು ಅಂತಿಮಗೊಳಿಸಲು ಕೆಲಸ ಮಾಡುತ್ತಿವೆ.

22. ಉಭಯ ದೇಶಗಳ ನಡುವಿನ ರಕ್ಷಣಾ ಸಹಕಾರವನ್ನು ಅಭಿವೃದ್ಧಿಪಡಿಸುವ ಮತ್ತು ಬಲಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಎರಡೂ ಕಡೆಯವರು ಒಪ್ಪಿಕೊಂಡರು, ಇದು ಉಭಯ ದೇಶಗಳ ಸಶಸ್ತ್ರ ಪಡೆಗಳ ನಡುವೆ ತಿಳುವಳಿಕೆ ಒಪ್ಪಂದಕ್ಕೆ (MoU) ಸಹಿ ಹಾಕುವುದನ್ನು ಒಳಗೊಂಡಿರಬಹುದು. ಹೆಚ್ಚುವರಿಯಾಗಿ, ಬಹ್ರೈನ್ ಸಂಸ್ಥಾನವು 2023 ರಲ್ಲಿ ಬಹ್ರೈನ್ ಸಂಸ್ಥಾನದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಸಂಯೋಜಿತ ಸಾಗರ ಪಡೆಗಳಿಗೆ ಭಾರತ ಸೇರುವುದನ್ನು ಸ್ವಾಗತಿಸಿತು. ನವೆಂಬರ್ 2024 ರಲ್ಲಿ 7ನೇ ಬಹ್ರೈನ್ ಇಂಟರ್ನ್ಯಾಷನಲ್ ಏರ್ ಶೋ (BIAS) ನಲ್ಲಿ 05 ಧ್ರುವ್ ಹೆಲಿಕಾಪ್ಟರ್‌ಗಳನ್ನು

ಒಳಗೊಂಡಿರುವ ಭಾರತೀಯ ವಾಯುಪಡೆಯ ಸಾರಂಗ್ ಏರೋಬ್ಯಾಟಿಕ್ ತಂಡದ ಭಾಗವಹಿಸುವಿಕೆಯನ್ನು ಬಹ್ರೈನ್ ಪ್ರಶಂಸಿಸಿತು.

23. ಅಂತಾರಾಷ್ಟ್ರೀಯ ಭಯೋತ್ಪಾದನೆಯನ್ನು ಎದುರಿಸುವ ಕ್ಷೇತ್ರದಲ್ಲಿ ದ್ವಿಪಕ್ಷೀಯ ಭದ್ರತಾ ಸಂವಾದ ಮತ್ತು ಜಂಟಿ ಸ್ಟೀರಿಂಗ್ ಸಮಿತಿಯು (JSC) ಸೈಬರ್ ಭದ್ರತೆ ಸೇರಿದಂತೆ ಭದ್ರತಾ ಸಹಕಾರದ ಕ್ಷೇತ್ರದಲ್ಲಿ ಸಾಂಸ್ಥಿಕ ಸಹಕಾರವನ್ನು ಸ್ಥಾಪಿಸುವಲ್ಲಿ ಪ್ರಮುಖ ಕಾರ್ಯವಿಧಾನಗಳಾಗಿವೆ ಎಂಬುದನ್ನು ಭಾರತ ಒಪ್ಪಿಕೊಂಡಿತು. ಎರಡೂ ಕಡೆಯವರು ಮೂರನೇ ಭದ್ರತಾ ಸಂವಾದವನ್ನು ಮತ್ತು ಮೂರನೇ JSC ಯನ್ನು ಆದಷ್ಟು ಬೇಗ ನಡೆಸಲು ಒಪ್ಪಿಕೊಂಡರು.

24. ಎರಡೂ ಸಚಿವಾಲಯಗಳು ಭಯೋತ್ಪಾದನೆಯ ಎಲ್ಲಾ ರೂಪಗಳನ್ನು ಮತ್ತು ಅಭಿವ್ಯಕ್ತಿಗಳನ್ನು ಖಂಡಿಸುವುದಾಗಿ ಪುನರುಚ್ಚರಿಸಿದವು ಮತ್ತು ಇತರ ದೇಶಗಳ ವಿರುದ್ಧ ಭಯೋತ್ಪಾದಕ ಕೃತ್ಯಗಳ ಬಳಕೆಯನ್ನು ತಿರಸ್ಕರಿಸಲು ಮತ್ತು ಕೈಬಿಡಲು ಎಲ್ಲಾ ರಾಷ್ಟ್ರಗಳಿಗೆ ಕರೆ ನೀಡಿದರು.

25. ಎರಡು ಬದಿಗಳು ಬಹ್ರೈನ್‌ನಲ್ಲಿನ ಭಾರತೀಯ ಸಮುದಾಯದ ಪಾತ್ರವನ್ನು ಎರಡು ದೇಶಗಳ ನಡುವಿನ ಪ್ರಮುಖ ಸಂಬಂಧದ ಕೊಂಡಿಯಾಗಿ ಮತ್ತು ಬಹ್ರೈನ್ ರಾಜ್ಯದ ಅಭಿವೃದ್ಧಿಯಲ್ಲಿ ಅವರ ಪ್ರಮುಖ ಕೊಡುಗೆಯನ್ನು ಪ್ರಶಂಸಿಸಿದವು. ಸಹಭಾಗಿತ್ವ ಮತ್ತು ಶಾಂತಿಯುತ ಸಹ-ಅಸ್ತಿತ್ವದ ಸಂಸ್ಥಾನದ ಉದಾರ ನೀತಿಗಳನ್ನು ಭಾರತವು ಪ್ರಶಂಶಿಸಿತು ಮತ್ತು ಬಹ್ರೈನ್ ಅನ್ನು ಭಾರತೀಯ ವೃತ್ತಿಪರರು ಮತ್ತು ಕೆಲಸಗಾರರಿಗೆ ಮತ್ತು ಅವರ ಕುಟುಂಬಗಳಿಗೆ ಆದ್ಯತೆಯ ತಾಣವನ್ನಾಗಿ ಮಾಡುವಲ್ಲಿ ಅವರ ಸ್ವಾಗತಾರ್ಹ ಸಮಾಜದ ವಾತಾವರಣವನ್ನು ಪ್ರಶಂಸಿಸಲಾಯಿತು. ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ಎರಡೂ ದೇಶಗಳ ನಿಕಟ ಸಹಕಾರವನ್ನು ದೃಢಪಡಿಸಲಾಯಿತು, ಇದು ಅದರಿಂದಾಗುವ ಪರಿಣಾಮವನ್ನು ತಗ್ಗಿಸಲು ಸಹಾಯ ಮಾಡಿತು. ಕಳೆದ ವರ್ಷದಲ್ಲಿ ಬಹ್ರೈನ್‌ನ ಔದಾರ್ಯವನ್ನು ಪ್ರತಿಬಿಂಬಿಸುವಂತೆ ಭಾರತೀಯ ರಾಷ್ಟ್ರೀಯತೆಯ 125 ಕ್ಕೂ ಹೆಚ್ಚು ಕೈದಿಗಳಿಗೆ ಸಂಸ್ಥಾನವು ನೀಡಿದ ಕ್ಷಮಾಪಣೆಗಾಗಿ ಬಹ್ರೈನ್ ಸಂಸ್ಥಾನದ ನಾಯಕತ್ವ ಮತ್ತು ಸರ್ಕಾರಕ್ಕೆ ಭಾರತದ ಕಡೆಯಿಂದ ಧನ್ಯವಾದಗಳನ್ನು ಸಲ್ಲಿಸಲಾಯಿತು.

26. ಉಭಯ ವಿದೇಶಾಂಗ ಮಂತ್ರಿಗಳು ದ್ವಿಮುಖ ಪ್ರವಾಸೋದ್ಯಮದಲ್ಲಿನ ಏರುಗತಿಯ ಹೆಚ್ಚಳ ಮತ್ತು ಜನರೊಂದಿಗೆ ಜನರ ನಡುವಿನ ಸಂಬಂಧಗಳನ್ನು ಮತ್ತು ಎರಡು ದೇಶಗಳ ನಡುವಿನ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಅದು ಬೀರಿದ ಪ್ರಭಾವದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.

27. ಇಬ್ಬದಿಯಿಂದಲೂ ರಾಯಭಾರದ ವಿಷಯಗಳಲ್ಲಿ ಸಹಕಾರವನ್ನು ಗಾಢವಾಗಿಸಲು ಒಪ್ಪಿಗೆ ನೀಡಲಾಯಿತು ಮತ್ತು ರಾಯಭಾರ ವ್ಯವಹಾರಗಳಲ್ಲಿ ಪರಸ್ಪರ ಹಿತಾಸಕ್ತಿಯ ಸಮಸ್ಯೆಗಳನ್ನು ಚರ್ಚಿಸಲು ಮತ್ತು ರಾಯಭಾರ ವಿಷಯಗಳಲ್ಲಿ ಸಹಕಾರವನ್ನು ಬಲಪಡಿಸಲು ಜಂಟಿ ರಾಯಭಾರ ಸಮಿತಿಯನ್ನು ಸ್ಥಾಪಿಸುವ ನಿರ್ಧಾರವನ್ನು ಸ್ವಾಗತಿಸಲಾಯಿತು.

28. ಉಭಯ ದೇಶಗಳು ತಮ್ಮಿಂದ 2019-23 ರಲ್ಲಿ ಸಹಿ ಮಾಡಿದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮವನ್ನು (CEP) ನೆನಪಿಸಿಕೊಂಡವು ಮತ್ತು ಐತಿಹಾಸಿಕ ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುವಲ್ಲಿ CEP ಅನುಷ್ಠಾನದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಜುಲೈ 2024 ರಲ್ಲಿ ನವದೆಹಲಿಯಲ್ಲಿ ನಡೆದ ಯುನೆಸ್ಕೋದ 46 ನೇ WHC ಗಾಗಿ ಗೌರವಾನ್ವಿತ ಶೇಖ್ ಖಲೀಫಾ ಬಿನ್ ಅಹ್ಮದ್ ಬಿನ್ ಅಬ್ದುಲ್ಲಾ ಅಲ್ ಖಲೀಫಾ ಅವರ ಭಾರತದ ಯಶಸ್ವಿ ಭೇಟಿಗೆ ಮತ್ತು ಮುಂದೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ತೆಗೆದುಕೊಳ್ಳಲು ಭಾರತದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ, ಗೌರವಾನ್ವಿತ ಗಜೇಂದ್ರ ಸಿಂಗ್ ಶೇಖಾವತ್ ಅವರೊಂದಿಗಿನ ಭೇಟಿಗಾಗಿ EAM ಸಂತೋಷವನ್ನು ವ್ಯಕ್ತಪಡಿಸಿತು. "2025-2029 ರ ಅವಧಿಗೆ - ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ"ವನ್ನು ರಿನೀವಲ್ ಮಾಡುವ ಕುರಿತು ಚರ್ಚೆಗಳನ್ನು ಮುಂದುವರಿಸಲು ಎರಡೂ ಕಡೆಯಿಂದ ಒಪ್ಪಿಗೆ ನೀಡಲಾಯಿತು."

29. ಎರಡೂ ಕಡೆಯವರು ಶಿಕ್ಷಣ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರದ ವ್ಯಾಪ್ತಿಯನ್ನು ವಿಸ್ತರಿಸಲು ಒಪ್ಪಿಕೊಂಡರು. ಈ ವಿಷಯದಲ್ಲಿ, ಭಾರತದಲ್ಲಿ ಪ್ರಮುಖ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನೋಂದಾಯಿಸಲು ಬಯಸುವ ಹೆಚ್ಚಿನ ಬಹ್ರೈನ್ ವಿದ್ಯಾರ್ಥಿಗಳನ್ನು ಭಾರತೀಯರ ಕಡೆಯಿಂದ ಸ್ವಾಗತಿಸಲಾಯಿತು. ಶಿಕ್ಷಣ ಸಹಕಾರವನ್ನು ಹೆಚ್ಚಿಸಲು ಉಭಯ ಸರ್ಕಾರಗಳ ನಡುವೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಲು ಕೆಲಸ ಮಾಡುವ ಮಹತ್ವವನ್ನು ಎರಡೂ ಕಡೆಯವರು ಒತ್ತಿ ಹೇಳಿದರು.

30. "ವಸುಧೈವ ಕುಟುಂಬಕಂ: ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ವಿಷಯದಲ್ಲಿ ನಡೆಸಲಾದ ಭಾರತದ G20 ಶೃಂಗಸಭೆಯ ಯಶಸ್ವಿ ಆಯೋಜನೆಗಾಗಿ ಬಹ್ರೈನ್ ಭಾರತವನ್ನು ಅಭಿನಂದಿಸಿತು. Y-20 ಶೃಂಗಸಭೆಯನ್ನು ಒಳಗೊಂಡಂತೆ ಬಹ್ರೈನ್‌ನ ಭಾಗವಹಿಸುವಿಕೆಗೆ ಭಾರತೀಯರ ಕಡೆಯಿಂದ ಕೃತಜ್ಞತೆಯನ್ನು ವ್ಯಕ್ತಪಡಿಸಲಾಯಿತು.

31. "ವಾಯ್ಸ್ ಆಫ್ ಗ್ಲೋಬಲ್ ಸೌತ್" ಶೃಂಗಸಭೆಗಳ ಎಲ್ಲಾ ಮೂರು ಆವೃತ್ತಿಗಳಲ್ಲಿ ಬಹ್ರೈನ್ ಭಾಗವಹಿಸುವಿಕೆಯನ್ನು EAM ಶ್ಲಾಘಿಸಿದೆ, ಇದು ಜಾಗತಿಕ ದಕ್ಷಿಣದ ದೇಶಗಳನ್ನು ತಮ್ಮ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಆದ್ಯತೆಗಳನ್ನು ಹಂಚಿಕೊಳ್ಳಲು ಒಟ್ಟಿಗೆ ತರುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಆಗಸ್ಟ್ 2024 ರಲ್ಲಿ ನಡೆಸಲಾದ 3 ನೇ ಜಾಗತಿಕ ದಕ್ಷಿಣ

ಶೃಂಗಸಭೆಯಲ್ಲಿ "ಜಾಗತಿಕ ದಕ್ಷಿಣ ಮತ್ತು ಜಾಗತಿಕ ಆಡಳಿತ" ಕುರಿತು ವಿದೇಶಾಂಗ ಮಂತ್ರಿಗಳ ಅಧಿವೇಶನದಲ್ಲಿ ತನ್ನ ಮೌಲ್ಯಯುತ ದೃಷ್ಟಿಕೋನಗಳು ಮತ್ತು ಆಲೋಚನೆಗಳನ್ನು ಹಂಚಿಕೊಂಡಿದ್ದಕ್ಕಾಗಿ ವಿದೇಶಾಂಗ ಸಚಿವಾಲಯವು ಗೌರವಾನ್ವಿತ  ಡಾ. ಅಬ್ದುಲ್‌ಲತೀಫ್ ಬಿನ್ ರಶೀದ್ ಅಲ್ಜಯಾಣಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿತು ಮತ್ತು ಪರಿಣಾಮಕಾರಿ ಜಾಗತಿಕ ಆಡಳಿತ ಸುಧಾರಣೆಗಳ ಅಗತ್ಯತೆ ಮತ್ತು ಜಾಗತಿಕ ದಕ್ಷಿಣ ದೇಶಗಳಿಗೆ ಸ್ವಚ್ಛ ಮತ್ತು ಹಸಿರು ತಂತ್ರಜ್ಞಾನಗಳಿಗೆ ಸಮಾನ ಪ್ರವೇಶವನ್ನು ಒಳಗೊಂಡಂತೆ ಹಲವಾರು ಸಮಕಾಲೀನ ಜಾಗತಿಕ ಸಮಸ್ಯೆಗಳ ಮೇಲೆ ಎರಡೂ ದೇಶಗಳು ಬಲವಾದ ಸಂಯೋಜನೆಗಳನ್ನು ಹೊಂದಿವೆ ಎಂಬುದನ್ನು ಉಲ್ಲೇಖಿಸಿತು.

32. ಈ ವರ್ಷ ಮೇ 2024 ರಲ್ಲಿ ಮನಾಮದಲ್ಲಿ ನಡೆದ ಅರಬ್ ಲೀಗ್ ಶೃಂಗಸಭೆಯ ನೇತೃತ್ವವನ್ನು ವಹಿಸಿಕೊಂಡಿರುವುದಕ್ಕಾಗಿ ಬಹ್ರೈನ್ ಅನ್ನು ಭಾರತದ ಕಡೆಯಿಂದ ಅಭಿನಂದಿಸಲಾಯಿತು ಮತ್ತು ಅದ್ಭುತ ಆಯೋಜನೆಯನ್ನು ಶ್ಲಾಘಿಸಲಾಯಿತು. ಸೆಪ್ಟೆಂಬರ್ 2024 ರಲ್ಲಿ ರಿಯಾದ್‌ನಲ್ಲಿ ನಡೆದ ಕಾರ್ಯತಂತ್ರದ ಸಂವಾದಕ್ಕಾಗಿ ಭಾರತ - GCC ಜಂಟಿ ಸಚಿವರ ಸಭೆಯ ಅಭಿಪ್ರಾಯದಂತೆ, GCC ದೇಶಗಳೊಂದಿಗೆ ಭಾರತದ ಬಲವಾದ ಬಾಂಧವ್ಯವನ್ನು ಬಲಪಡಿಸುವಲ್ಲಿ ಬಹ್ರೈನ್ ಪಾಲುದಾರನಾಗಿ ಉಳಿಯುತ್ತದೆ ಎಂಬ ಭರವಸೆಯನ್ನು ಭಾರತದ ಕಡೆಯಿಂದ ವ್ಯಕ್ತಪಡಿಸಲಾಯಿತು.

33. ದ್ವಿ ರಾಷ್ಟ್ರಗಳು ಪರಸ್ಪರ ಆಸಕ್ತಿಯ ಪ್ರಮುಖ ಜಾಗತಿಕ ಬೆಳವಣಿಗೆಗಳು, ಪ್ರಾದೇಶಿಕ ಮತ್ತು ಬಹುಪಕ್ಷೀಯ ಸಮಸ್ಯೆಗಳನ್ನು ಚರ್ಚಿಸಿದವು. ಎರಡೂ ದೇಶಗಳು ಪ್ರಾದೇಶಿಕವಾಗಿ ಪರಸ್ಪರ ಪ್ರಮುಖ ಪಾಲುದಾರರಾಗಿವೆ, ಪಶ್ಚಿಮ ಏಷ್ಯಾದಲ್ಲಿ ಹೆಚ್ಚು ಶಾಂತಿಯುತ ಮತ್ತು ಒಳಗೊಳ್ಳುವ ಜಾಗತಿಕ ಸಮುದಾಯವನ್ನು ಬೆಳೆಸಲು ಒಟ್ಟಿಗೆ ಕೆಲಸ ಮಾಡುತ್ತವೆ. ಮಧ್ಯಪ್ರಾಚ್ಯದಲ್ಲಿ ಶಾಂತಿಗಾಗಿ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸುವ ಬಹ್ರೈನ್ ಕಡೆಯ ಪ್ರಸ್ತಾವನೆಯನ್ನು ಭಾರತವು ಸ್ವಾಗತಿಸಿದೆ.

34.  ಎರಡೂ ದೇಶಗಳು ವಿದೇಶಿ ಕಚೇರಿ ಸಮಾಲೋಚನೆಗಳು (FOC ಗಳು) ಮತ್ತು ಮಾನವಶಕ್ತಿ ಮತ್ತು ಅಭಿವೃದ್ಧಿಯ MoU ಅಡಿಯಲ್ಲಿ ಜಂಟಿ ಸಮಿತಿಯ ಸಭೆ ಸೇರಿದಂತೆ ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಕಾರ್ಯವಿಧಾನಗಳ ಆರಂಭಿಕ ಸಭೆಗಳನ್ನು ನಡೆಸುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದವು.  HJC ಯ ನಿರ್ಧಾರಗಳನ್ನು ಅನುಸರಿಸಲು ನವದೆಹಲಿಯಲ್ಲಿ ಏಳನೇ FOC ಯು ಪರಸ್ಪರ ಅನುಕೂಲಕರ ದಿನಾಂಕದಲ್ಲಿ ನಡೆಯಬೇಕು ಎಂದು ಒಪ್ಪಿಕೊಳ್ಳಲಾಯಿತು.

35.  ಉನ್ನತ ಜಂಟಿ ಆಯೋಗದ ಐದನೇ ಸಭೆಯನ್ನು ಭಾರತದಲ್ಲಿ ನಡೆಸಲಾಗುವುದು ಎಂಬುದನ್ನು ಸಮ್ಮತಿಸಲಾಯಿತು, ಇದರ ದಿನಾಂಕಗಳನ್ನು ರಾಜತಾಂತ್ರಿಕ ಮಾರ್ಗಗಳ ಮೂಲಕ ನಿರ್ಧರಿಸಲಾಗುತ್ತದೆ.

**ಮನಮಾ,**

**ಡಿಸೆಂಬರ್ 09, 2024**